# ನವೊಮಿ ಎಂಬ ಬಂಡಾಯಗಾರ್ತಿ




ಸಾಮಾನ್ಯವಾಗಿ ಸ್ಟಾರ್ ಕ್ರೀಡಾಪಟುಗಳು ಸಾಮಾಜಿಕ ತರತಮ, ಮೇಲುಕೀಳಿನ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಒಂದು ಎತ್ತರಕ್ಕೆ ಬೆಳೆದು ಶ್ರೀಮಂತಿಕೆಯ ಸುಪ್ಪತ್ತಿಗೆಗೆ ಏರಿದ ಬಳಿಕ ಅವರದ್ದೇ ಆದ ಅಭಿಮಾನಿ ಬಳಗವೊಂದು ತಲೆ ಎತ್ತಿರುತ್ತದೆ. ಈ ಅಭಿಮಾನಿಗಳಿಗೆ ತಮ್ಮ ಸೂಪರ್‌ಸ್ಟಾರ್‌ನ ಕ್ರೀಡಾಂಗಣದ ಸಾಧನೆಗಳಷ್ಟೇ ಮುಖ್ಯವಾಗುತ್ತವೆ. ಹೊರಗಿನ ವಿಷಯಗಳಿಗೆ ಸಂಬಂಧಿಸಿ ರಾಜಕೀಯ ನಿಲುವುಗಳನ್ನು ಆತ/ ಆಕೆ ತಳೆಯುವುದರ ಬಗ್ಗೆ ಅಭಿಮಾನಿಗಳಿಗೆ ಆಸಕ್ತಿ ಇರುವುದಿಲ್ಲ. ಆದರೆ ಎಲ್ಲ ನಿಯಮಗಳಿಗೂ ಅಪವಾದಗಳು ಇರುವಂತೆ ಕ್ರೀಡಾಕ್ಷೇತ್ರದಲ್ಲೂ ಅಪವಾದಗಳಿವೆ. ಬಹಳ ಮುಖ್ಯವಾಗಿ ಬಾಕ್ಸಿಂಗ್‌ನಂತಹ, ಕಪ್ಪು ಜನರೇ ಪಾರಮ್ಯ ಮೆರೆಯುತ್ತಿರುವ ಕ್ರೀಡೆಗಳಲ್ಲಿ ವರ್ಣಭೇದದ ಕುರಿತು ಕ್ರೀಡಾಪಟುಗಳು ಸಿಡಿದೆದ್ದು ಪ್ರತಿಭಟಿಸುವುದನ್ನು ಕಂಡಿದ್ದೇವೆ. ಆದರೆ ಟೆನಿಸ್‌ನಲ್ಲಿ ಈ ರೀತಿಯ ಗಟ್ಟಿ ಪ್ರತಿಭಟನೆ ಕಡಿಮೆಯೇ. ಈಗ ಜಪಾನಿನ ಅಂತರರಾಷ್ಟ್ರೀಯ ಟೆನಿಸ್ ತಾರೆ, ನವೊಮಿ ಒಸಾಕಾ ಇಂತಹದ್ದೊಂದು ಪ್ರತಿಭಟನೆಯನ್ನು ದಾಖಲಿಸಿ ಸುದ್ದಿ ಮಾಡಿದ್ದಾರೆ.

ಅಮೆರಿಕದ ಮತ್ತು ಯೂರೋಪಿನ ಆಟಗಾರರೇ ಹೆಚ್ಚಾಗಿ ಮಿಂಚುತ್ತಿರುವ ಟೆನಿಸ್‌ನಲ್ಲಿ ನವೊಮಿ ಒಸಾಕಾ ಒಂದು ವಿಭಿನ್ನ ಹೆಸರು. ಜಪಾನಿನ ಈ ತಾರೆ ಈಗಾಗಲೆ ವಿಶ್ವದ ನಂಬರ್ ಒನ್ ಸ್ಥಾನವನ್ನು ಒಮ್ಮೆ ತನ್ನದಾಗಿಸಿಕೊಂಡವರು. ಜಪಾನೀ ಮತ್ತು ಹೈತೀ ಮಿಶ್ರಮೂಲದ ಈ ಕರಿಯ ತಾರೆ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವುದೇ ಅಲ್ಲದೆ, ವಿಶ್ವದ ಅತ್ಯಂತ ಶ್ರೀಮಂತ ಮಹಿಳಾ ಆಟಗಾರ್ತಿ ಎಂದೂ ಈ ವರ್ಷ ಹೆಸರು ಮಾಡಿದ್ದಾರೆ.

ಇನ್ನೂ22ರ ಹರೆಯದಲ್ಲೇ ನವೊಮಿ ಮಾಡಿರುವ ಸಾಧನೆಗಳು ಟೆನಿಸ್ ಜಗತ್ತಿನಲ್ಲಿ ಈಗಾಗಲೆ ಮನೆಮಾತಾಗಿವೆ. ಗಂಟೆಗೆ 200 ಕಿ.ಮೀ ವೇಗದಲ್ಲಿ ಸರ್ವಿಸ್ ಮಾಡುವ ಈಕೆಯ ಬಾಹುಬಲದ ಬಗ್ಗೆಯೂ ದಂತಕಥೆಗಳಿವೆ. ಕೊರೊನಾ ಪೀಡಿತ ಜಗತ್ತಿನ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದದ್ದು ಈಕೆಯ ಇತ್ತೀಚಿನ ಹೆಗ್ಗಳಿಕೆ. ವಿಕ್ಟೋರಿಯಾ ಅಜರೆಂಕಾ ವಿರುದ್ಧ ಫೈನಲ್‌ನಲ್ಲಿ ಗೆದ್ದು ಅಮೆರಿಕನ್ ಓಪನ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡದ್ದು ಆಕೆಯ ಅಭಿಮಾನಿಗಳ ಪಾಲಿಗೆ ಮರೆಯಲಾರದ ಗೆಲುವು. ಏಕೆಂದರೆ ಇದು ಆಕೆ ಗೆಲ್ಲುತ್ತಿರುವ ಎರಡನೇ ಅಮೆರಿಕನ್ ಓಪನ್ ಪ್ರಶಸ್ತಿ.

ಆಟದ ಅಂಕಣದಲ್ಲೂ ಮುಖಕ್ಕೆ ಮಾಸ್ಕ್ ಬಳಸಲೇಬೇಕಾದ ಅನಿವಾರ್ಯತೆಯನ್ನು ಕೊರೊನಾ ಸೃಷ್ಟಿಸಿದೆ. ನವೊಮಿ ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಕುರಿತ ತಮ್ಮ ದೃಢ ನಿಲುವನ್ನು ಪ್ರದರ್ಶಿಸುವ ಬುದ್ಧಿವಂತಿಕೆ ತೋರಿಸಿರುವುದು ವಿಶೇಷ. ಆಕೆ ಆಟದ ಅವಧಿಯಲ್ಲಿ ಬಳಸಿದ ಮಾಸ್ಕ್‌ನಲ್ಲಿ ಜನಾಂಗೀಯ ತಾರತಮ್ಯ ಮತ್ತು ಪೊಲೀಸ್ ಕ್ರೌರ್ಯಕ್ಕೆ ಬಲಿಯಾದ ಕರಿಯರ ಮುಖಗಳು ಇದ್ದವು. ಇತ್ತೀಚೆಗೆ ಅಮೆರಿಕದಲ್ಲಿ ಪೊಲೀಸ್ ಕ್ರೌರ್ಯಕ್ಕೆ ಬಲಿಯಾದ ಜಾರ್ಜ್ ಫ್ಲಾಯ್ಡ್‌ನಿಂದ ಹಿಡಿದು ಟಾಮಿರ್ ರೈಸ್‌ವರೆಗೆ ವರ್ಣಬೇಧದಿಂದ ಬಳಲಿದ ಒಟ್ಟು ಏಳು ಮಂದಿಯ ಚಿತ್ರಗಳನ್ನು ಮಾಸ್ಕ್ ಮೇಲೆ ಪ್ರದರ್ಶಿಸುವ ಮೂಲಕ ನವೊಮಿ ಸಾಮಾಜಿಕ ನ್ಯಾಯದ ಕುರಿತ ತಮ್ಮ ಬದ್ಧತೆಯನ್ನು ದೃಢಪಡಿಸಿದ್ದಾರೆ.

ಹಣ ಮತ್ತು ಖ್ಯಾತಿಯೇ ಮುಖ್ಯವಾಗಿರುವ ಕ್ರೀಡಾಲೋಕದಲ್ಲಿ ಅಥ್ಲೀಟ್ ಒಬ್ಬರು ಪ್ರತಿಭಟನೆ ಮತ್ತು ಸಾಧನೆ ಎರಡನ್ನೂ ಸರಿದೂಗಿಸಿಕೊಂಡು ಹೋಗುವುದು ಕಷ್ಟದ ಕೆಲಸವೇ. ಬಹುತೇಕ ಅಭಿಮಾನಿಗಳಿಗೆ ಜಯದ ಉನ್ಮಾದ ಬೇಕಿದೆಯೇ ಹೊರತು, ಸಾಮಾಜಿಕ ವಿಚಾರಗಳ ಕುರಿತ ಅರಿವಲ್ಲ. ಆದರೆ ನವೊಮಿ ವಿಜಯೋತ್ಸವದ ಅಮಲಿನಲ್ಲಿ ತೇಲಿ ಹೋಗದೆ ಪ್ರೇಕ್ಷಕರು ಮತ್ತು ವೀಕ್ಷಕರ ಗಮನ ವರ್ಣಭೇದ ಮತ್ತು ಪೊಲೀಸ್ ಕ್ರೌರ್ಯದ ಕಠೋರತೆಯ ಕಡೆಗೂ ಸೆಳೆಯುವಲ್ಲಿ ಯಶಸ್ವಿ ಆಗಿದ್ದಾರೆ.

ಕೇವಲ ಕ್ರೀಡಾ ಅಂಕಣ ಮಾತ್ರವಲ್ಲ, ಹೊರಗೆ ನಡೆಯುತ್ತಿರುವ ಪ್ರತಿಭಟನೆಗಳಲ್ಲೂ ನವೊಮಿ ಭಾಗವಹಿಸಿದ್ದಾರೆ. ಜಾರ್ಜ್ ಫ್ಲಾಯ್ಡ್ ಕೊಲೆಯ ವಿರುದ್ಧ ಮಿನಿಯಪೊಲೀಸ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದು, ವರ್ಣಭೇದ ಪ್ರತಿಭಟಿಸಿ ಪತ್ರಿಕೆಯೊಂದಕ್ಕೆ ಲೇಖನ ಬರೆದದ್ದು, ವೆಸ್ಟರ್ನ್ ಓಪನ್‌ನಲ್ಲಿ ಸೆಮಿಫೈನಲ್ ಪಂದ್ಯದಲ್ಲಿ ಆಟವಾಡಲು ನಿರಾಕರಿಸಿದ್ದು, ಸಾಮಾಜಿಕ ಜಾಲತಾಣಗಳ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಹೀಗೆ ಅನ್ಯಾಯದ ವಿರುದ್ಧ ಪ್ರತಿಭಟನೆಯಲ್ಲಿ ಎಲ್ಲೆಡೆ ನವೊಮಿ ಮುಂಚೂಣಿಯಲ್ಲಿದ್ದಾರೆ.

2017ರವರೆಗೆ ಅಮೆರಿಕನ್ ಓಪನ್ ಅಂಕಣವನ್ನು ಹಲವು ವರ್ಷಗಳ ಕಾಲ ಅಕ್ಷರಶಃ ಆಳಿದಾಕೆ ಸೆರೆನಾ ವಿಲಿಯಮ್ಸ್. ಈಕೆ ಆಫ್ರಿಕನ್ ಮೂಲದ ಅಮೆರಿಕನ್ ತಾರೆ. ಸಾಮಾಜಿಕ ತಾರತಮ್ಯದ ವಿರುದ್ಧದ ಹೋರಾಟದಲ್ಲಿ ಸೆರೆನಾ ಕೂಡಾ ಮುಂಚೂಣಿಯಲ್ಲಿದ್ದರು. ಆದರೆ ಈಗ ನವೊಮಿ ಆಟದ ಘನತೆಯನ್ನು ಉಳಿಸಿಕೊಂಡೇ ಹೆಚ್ಚು ತೀವ್ರತರ ಪ್ರತಿಭಟನೆಗಳನ್ನು ದಾಖಲಿಸುತ್ತಿದ್ದಾರೆ. 2018ರ ಅಮೆರಿಕನ್ ಓಪನ್ ಫೈನಲ್‌ನಲ್ಲಿ ಸೆರೆನಾರನ್ನು ಬಗ್ಗುಬಡಿದು ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ನವೊಮಿ, ಮೊದಲ ಬಾರಿಗೆ ಜಾಗತಿಕ ಟೆನಿಸ್ ಲೋಕದ ಗಮನ ಸೆಳೆದಿದ್ದರು. ಆಗ ಕಪ್ ಕೈಯಲ್ಲಿ ಹಿಡಿದು ಪ್ರೇಕ್ಷಕರಿಗೆ ಪುಟ್ಟದೊಂದು ಥ್ಯಾಂಕ್ಸ್ ಹೇಳಲೂ ನವೊಮಿ ಬೆವರಿದ್ದುಂಟು. ಅಷ್ಟೊಂದು ನಾಚಿಕೆಯ ಸ್ವಭಾವ. ಆದರೆ ಈಗ ನವೊಮಿ ಹೆಚ್ಚು ಹೆಚ್ಚು ಬಹಿರ್ಮುಖಿ ಆಗಿದ್ದಾರೆ. ಗಟ್ಟಿಯಾಗಿ ಮಾತನಾಡತೊಡಗಿದ್ದಾರೆ.

ಟೆನಿಸ್‌ನಲ್ಲಿ ಕೋಟ್ಯಂತರ ಡಾಲರ್ ಹಣ ಹರಿದಾಡುತ್ತಿದೆ. ಇಲ್ಲಿ ಗೆಲುವು ಅಂದರೆ ಕೇವಲ ಆಟದ ಅಂಕಣದ ಗೆಲುವಷ್ಟೇ ಅಲ್ಲ, ಜಗತ್ತಿನ ಪ್ರತಿಷ್ಠಿತ ಗ್ರಾಹಕ ವಸ್ತುಗಳ ಮಾರುಕಟ್ಟೆಯ ಗೆಲುವೂ ಹೌದು. ಒಂದು ಗ್ರ್ಯಾನ್‌ಪ್ರಿ ಗೆದ್ದರೆ ಸಾಕು, ವಿಶ್ವದಾದ್ಯಂತ ಕಾರು, ಬೈಕು, ಸೋಪು, ಶೂ ಮಾರಾಟದ ವ್ಯಾಪಾರಿ ಜಾಲದ ಚಕ್ರವರ್ತಿಗಳೆಲ್ಲ 'ನಮಗೊಂದು ಜಾಹೀರಾತು ಕೊಡಿ' ಎಂದು ಗೆದ್ದ ಕ್ರೀಡಾಳುವಿನ ಪದತಲದಲ್ಲಿ ಬಂದು ನಿಲ್ಲುತ್ತಾರೆ. ಹಣ ಮತ್ತು ಖ್ಯಾತಿ ಎರಡನ್ನೂ ಸಂಭಾಳಿಸುವ ಎಚ್ಚರಿಕೆಯನ್ನು ಉಳಿಸಿಕೊಂಡೇ ನವೊಮಿ ಸಾಮಾಜಿಕ ನ್ಯಾಯದ ಹೋರಾಟದಲ್ಲೂ ಉಗ್ರವಾಗಿ ತೊಡಗಿಸಿಕೊಂಡಿರುವುದು ವಿಶೇಷ. 'ಕ್ರೀಡೆಯಲ್ಲಿ ರಾಜಕೀಯ ತರಬೇಡಿ' ಎಂದು ಗಟ್ಟಿಧ್ವನಿಯಲ್ಲಿ ಜಾಲತಾಣಗಳಲ್ಲಿ ಸದಾ ಕಿರುಚುತ್ತಿರುವ ಒಂದು ವರ್ಗದ ಪ್ರೇಕ್ಷಕರನ್ನೂ ತನ್ನ ನೇರ ಉತ್ತರಗಳ ಮೂಲಕ ಸುಮ್ಮನಾಗಿಸಿರುವುದು ನವೊಮಿ ಹೆಗ್ಗಳಿಕೆ. ಹೀಗಾಗಿಯೇ ಅಮೆರಿಕದ ಪ್ರತಿಷ್ಠಿತ 'ಟೈಮ್' ಮ್ಯಾಗಸಿನ್ ಇದೀಗ ಪ್ರಕಟಿಸಿರುವ 'ವಿಶ್ವದ 100 ಪ್ರತಿಷ್ಠಿತರ ಪಟ್ಟಿ–2020' ರಲ್ಲಿ ನವೊಮಿ ಸ್ಥಾನ ಗಳಿಸಿದ್ದಾರೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65